# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು

## ಃಸಿ.ಸಿ. ಸಂಖ್ಯೆ–236ಃ2019

| | |
|---|---|
| ಪಿರ್ಯಾದಿ | ಃ ಎಂ.ಈ. ರಮೇಶ ಃಬಿನ್ಃ ಈರೇಗೌಡ 52 ವರ್ಷ, ಗೆಂಡೇಹಳ್ಳಿ ರಸ್ತೆ, ಬೇಲೂರು ಟೌನ್, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ. |

ವಿರುದ್ಧ

| | |
|---|---|
| ಆರೋಪಿ | ಃ ಸಿ.ಜೆ. ಬಿನು ಮಾತ್ಯೂ , 42 ವರ್ಷ, ಕ್ವಾಲಿಟಿ ಕಾಲೇಜ್ ಅಂಡ್ ಸ್ಕೂಲ್ ಆಫ್ ನರ್ಸಿಂಗ್, ನಂ–4/5, ಪಿ.ಪಿ. ಲೇಔಟ್, ಸುಬ್ರಮಣ್ಯಪುರ ಅಂಚೆ, ಉತ್ತರಹಳ್ಳಿ,ಕೆಂಗೇರಿ ಮುಖ್ಯ ರಸ್ತೆ, ಉತ್ತರಹಳ್ಳಿ, ಬೆಂಗಳೂರು–560061.. |

### ಃ ಆರೋಪಣೆಯ ಸಾರಾಂಶ ಃ

ಆರೋಪಿಯಾದ ನೀನು 2017 ರ ಅಕ್ಟೋಬರ್ ತಿಂಗಳಲ್ಲಿ ಪಿರ್ಯಾದುದಾರನ ಬಳಿ ಬಂದು ಬೆಂಗಳೂರಿನಲ್ಲಿ ನರ್ಸಿಂಗ್ ಕಾಲೇಜು ಮಾಡುತ್ತಿದ್ದು, ಸದರಿ ಕಾಲೇಜನ್ನು ಅಭಿವೃದ್ಧಿಪಡಿಸಲು ಮತ್ತು ಸದರಿ ಕಾಲೇಜು ಅಭಿವೃದ್ಧಿಪಡಿಸಲು ಮಾಡಿರುವ ಕೈ ಸಾಲವನ್ನು ತೀರಿಸುವ ಉದ್ದೇಶದಿಂದ ಪಿರ್ಯಾದುದಾರನಿಂದ ರೂ.9,6,000/– ಗಳನ್ನು ನಗದಾಗಿ ಪಡೆದಿದ್ದು, ಸದರಿ ಸಾಲದ ಮರುಪಾವತಿ ಮಾಡುವ ಉದ್ದೇಶದಿಂದ ಆರೋಪಿಯಾದ ನೀನು ಖಾತೆ ಹೊಂದಿರುವ ಆಕ್ಸಿಸ್ ಬ್ಯಾಂಕ್ ಲಿಮಿಟೆಡ್, ನೆಲಮಂಗಲ, ಬೆಂಗಳೂರು ಶಾಖೆಯ ಚೆಕ್ ನಂಃ 035171ರ ರೂ. 9,60,000/– ಮೊತ್ತದ ಚೆಕ್‌ನ್ನು ದಿನಾಂಕಃ 12–12–2018ಕ್ಕೆ ನಮೂದಿಸಿ ಕೊಟ್ಟಿದ್ದು, ಪಿರ್ಯಾದುದಾರನು ಸದರಿ ಚೆಕ್‌ನ್ನು ನಗಧೀಕರಿಸಿಕೊಳ್ಳುವ ಉದ್ದೇಶದಿಂದ ತಾನು ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್, ಬೇಲೂರು ಶಾಖೆಯ ಮೂಲಕ ಆರೋಪಿಯಾದ ನಿನ್ನ ಖಾತೆಗೆ ಹಾಜರುಪಡಿಸಿದಾಗ ಆರೋಪಿಯಾದ ನಿನ್ನ ಖಾತೆಯಲ್ಲಿ ಅಕೌಂಟ್ ಬ್ಲಾಕ್ಡ್ ಎಂದು ದಿನಾಂಕಃ 13–12–2018 ರಂದು ಬಂದ ಹಿಂಬರಹದ ಮೇರೆಗೆ ಆರೋಪಿಯಾದ ನಿನಗೆ ದಿನಾಂಕಃ11–01–2019 ರಂದು

ಚೆಕ್ ನಗಧೀಕರಣಗೊಳ್ಳದ ಸಂಗತಿಯನ್ನು ನೊಂದಾಯಿತ ಅಂಚೆಯ ನೋಟೀಸಿನ ಮೂಲಕ ಕಳಹಿಸಿದ್ದು, ಸದರಿ ನೋಟೀಸ್ ಆರೋಪಿಯಾದ ನಿನಗೆ ಜಾರಿಯಾದರೂ ಸಹ, ಇದೂವರೆಗೂ ಯಾವುದೇ ಹಣವನ್ನಾಗಲೀ, ಮರು ಉತ್ತರವನ್ನಾಗಲೀ ನೀಡಿರುವುದಿಲ್ಲ. ಆರೋಪಿಯಾದ ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಸಹ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

*ಪ್ರಶ್ನೆ ಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*

*ಉತ್ತರ ಃ*

*ಪ್ರಶ್ನೆ ಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?*
*ಉತ್ತರಃ*

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

ಸ್ಥಳ ಃ ಬೇಲೂರು
ದಿನಾಂಕಃ 06–09–2021

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು